**ದಿನಾಂಕ- 28-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು -10 ನೇ ಪ್ರತಿವಾದಿಯರ ಪರ ಶ್ರೀ . ಕೆ. ಪಿ. ಆರ್ ವಕೀಲರಿಂದಃ**

1 ರಿಂದ 8 ನೇ ವಾದಿಯರು 1 ರಿಂದ 9 ನೇ ಪ್ರತಿವಾದಿಯರು ಮೃತ ಸಲ್ವೋದೊರೆ ಡಿಸೋಜರವರ ಲಿನಿಯಲ್ ಡಿಸೆಡೆಂಟ್ಸ್ ಎಂದರೆ ಹೌದು. ಸಲ್ವೋದೊರೆ ಡಿಸೋಜ ರವರು ಮೃತರಾದ ನಂತರ ನೀವು ಹಾಜರುಪಡಿಸಿರುವ ನಿಶಾನೆ ಡಿ 6 ವಿಭಾಗಪತ್ರದಂತೆ ಸಲ್ವೋದೊರೆ ಡಿಸೋಜಗೆ ಸೇರಿದ ಆಸ್ತಿಗಳನ್ನು ಅವರ ಎಲ್ಲಾ ವಾರಸುದಾರರು ವಿಭಾಗ ಮಾಡಿಕೊಂಡಿದ್ದರು ಎಂದರೆ ಹೌದು . ನಿಶಾನೆ-ಡಿ6 ರ ಎಫ್ ಅನುಸೂಚಿಯ ಅನುಸಾರ ಸರ್ವೇ ನಂ.360 ರಲ್ಲಿನ ( ಪೋಡಿ ಆದ ನಂತರ ಹಾಗೂ ದಾವಾ ಅನುಸೂಚಿ 5 ನೇ ಐಟಂ ಸ್ವತ್ತು ಆದ ಸರ್ವೇ ನಂ 360/3) 40 ಸೆಂಟ್ಸ್ ಭೂಮಿಯು 1 ನೇ ಪ್ರತಿವಾದಿಯವರ ಹಿಸ್ಸೆಗೆ ಹಂಚಿಕೆಯಾಗಿದೆ ಎಂದರೆ ಹೌದು. ನಿಶಾನೆ ಡಿ-6 ರ ಕೆ ಅನುಸೂಚಿಯಲ್ಲಿ ವಿವರಿಸಿರುವಂತೆ ನಿಮಗೂ ಸಹ ಭೂಮಿಯು ಹಂಚಿಕೆಯಾಗಿದೆ ಎಂದರೆ 1 ಎಕ್ರೆ 21 ಸೆಂಟ್ಸ್ ಭೂಮಿಯು ಹಂಚಿಕೆಯಾಗಿದೆ. ನಿಶಾನೆ ಡಿ-6 ರ ಅನುಸಾರ ಯಾರಿಗೆಲ್ಲಾ ಆಸ್ತಿಯು ಹಂಚಿಕೆಯಾಗಿದೆಯೋ ಅವರು ಆಯಾ ಆಸ್ತಿಗಳ ಸ್ವಾಧೀನವನ್ನು ಹೊಂದಿ ಅಭಿವೃದ್ದಿಪಡಿಸಿಕೊಂಡು ಇರುತ್ತಾರೆ ಎಂದರೆ ಹೌದು. 1 ನೇ ಪ್ರತಿವಾದಿಯವರು ಅವರಿಗೆ ಹಂಚಿಕೆಯಾಗಿದ್ದ 40 ಸೆಂಟ್ಸ್ ಭೂಮಿಯನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಮಾರಾಟ ಮಾಡಿರುತ್ತಾರೆ ಆದರೇ ಅವರ ಹೆಸರು ಗೊತ್ತಿಲ್ಲ . ನಿಪಿ-9 ರ ಅನುಸಾರ ದಿ. 09-12-2006 ರಂದು ಒಂದನೇ ಪ್ರತಿವಾದಿಯವರು ಅವರಿಗೆ ಹಂಚಿಕೆಯಾಗಿದ್ದ 40 ಸೆಂಟ್ಸ್ ಜಾಗವನ್ನು ಯವಜಿನ್ ಡಿಸೋಜ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಯವಜಿನ್ ಡಿಸೋಜ ರವರು ದಿ. 26-06-2009 ರಂದು ಸುಧಾಕರ ತೋನ್ಸೆ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ . ಸುಧಾಕರ ತೋನ್ಸೆ ರವರು ಅವರು ಖರೀದಿ ಮಾಡಿದ 40 ಸೆಂಟ್ಸ್

ಜಾಗವನ್ನು 10ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 5ನೇ ಐಟಂ ಸ್ವತ್ತು ಈಗ ಯಾರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಅದು ನನಗೆ ಗೊತ್ತಿಲ್ಲ. 10ನೇ ಪ್ರತಿವಾದಿಯವರ ಹೆಸರಿನಲ್ಲಿ 5 ನೇ ಐಟಂ ಸ್ವತ್ತಿನ ಪಹಣಿ ಪತ್ರಿಕೆಯು ದಾಖಲು ಆಗಿರುತ್ತದೆ ಎಂದರೆ ಇರಬಹುದು. 4ನೇ ಪ್ರತಿವಾದಿಯವರು ಯಾರಿಗೆ ಹಂಚಿಕೆಯಾಗಿದ್ದ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತಾರೆ ಎಂದರೆ ನಮಗೆ ಹಂಚಿಕೆಯಾಗಿದ್ದ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತಾರೆ. 4ನೇ ಪ್ರತಿವಾದಿಯವರು ಕಟ್ಟಿದ್ದ ಮನೆಯ ಗೃಹಪ್ರವೇಶಕ್ಕೆ ಯಾರೆಲ್ಲಾ ಬಂದಿದ್ದರು ಎಂದರೆ 2 ಹಾಗೂ 5ನೇ ವಾದಿಯವರು ಬಂದಿದ್ದರು. ಸಾಕ್ಷಿಯವರು ಒಂದು ಭಾವಚಿತ್ರವನ್ನು ನೋಡಿ ಸದರಿ ಭಾವಚಿತ್ರವನ್ನು 4ನೇ ಪ್ರತಿವಾದಿಯವರು ಕಟ್ಟಿದ್ದ ಮನೆಯ ಗೃಹಪ್ರವೇಶದ ಸಮಯದಲ್ಲಿ ತೆಗೆಯಲಾಗಿದೆ ಎಂದು ಗುರುತಿಸಿದ್ದು ಅದನ್ನು ನಿಡಿ-8 ಎಂದು ಗುರುತಿಸಲಾಯಿತು. ನಿಡಿ-8ನ್ನು ಹಿಡಿದು ನೋಡಿದಾಗ ಮುಂಬದಿಯ ಸಾಲಿನಲ್ಲಿ ಕೆಂಪು ಸೀರೆಯನ್ನು ಧರಿಸಿರುವ ಮಹಿಳೆಯನ್ನು 2ನೇ ವಾದಿಯವರು ಎಂದು ಹಾಗೂ ಅವರ ಬಲಬದಿಯಲ್ಲಿ ಕೆಂಪು ಮತ್ತು ಹಳದಿ ಪಟ್ಟಿಯನ್ನು ಹೊಂದಿರುವ ಸೀರೆಯನ್ನು ಧರಿಸಿರುವ ಹಾಗೂ ಕೈಯಲ್ಲಿ ಸಣ್ಣ ಬ್ಯಾಗ್‌ನ್ನು ಹಿಡಿದಿರುವ ಮಹಿಳೆಯನ್ನು ನೋಡಿ ಅವರು 5ನೇ ವಾದಿಯವರು ಎಂದು ಸಾಕ್ಷಿಯವರು ಗುರುತಿಸಿರುತ್ತಾರೆ. ಸಾಕ್ಷಿಯವರು ಇನ್ನೊಂದು ಭಾವಚಿತ್ರವನ್ನು ನೋಡಿ ಈ ಭಾವಚಿತ್ರವನ್ನು ಸಹ ಮನೆಯ ಗೃಹಪ್ರವೇಶದ ಸಮಯದಲ್ಲಿ ತೆಗೆಯಲಾಗಿತ್ತು ಎಂದು ಗುರುತಿಸಿದ್ದು (ವಾದಿಯವರ ಪರ ಗೌರವಾನ್ವಿತ ವಕೀಲರು ಸದರಿ ಭಾವಚಿತ್ರವು ಮನೆಯ ಗೃಹಪ್ರವೇಶದ ಸಮಯದಲ್ಲಿ ತೆಗೆದಿರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ) ಸದರಿ ಭಾವಚಿತ್ರವನ್ನು ನಿಡಿ 9 ಎಂದು ಗುರುತಿಸಲಾಯಿತು. ನಿಡಿ-9ನ್ನು ಹಿಡಿದು ನೋಡಿದಾಗ ಬಲಭಾಗದಿಂದ ಮೊದಲ ಸಾಲಿನಲ್ಲಿ ನಿಂತಿರುವ ಮೊದಲು ಮಹಿಳೆಯನ್ನು 2ನೇ ವಾದಿ ಎಂದು, ಅವರ ಬಲಬದಿಯಲ್ಲಿರುವ ನೀಲಿ ಸೀರೆಯನ್ನು ಧರಿಸಿರುವ ಮಹಿಳೆಯನ್ನು 3ನೇ ವಾದಿ ಎಂದು, ಅವರ ಬಲಬದಿಯಲ್ಲಿರುವ ಚೂಡಿದಾರ ಧರಿಸಿರುವ ಮಹಿಳೆಯನ್ನು 7ನೇ ವಾದಿ ಎಂದು, ಅವರ

ಬಲಬದಿಯಲ್ಲಿ ನಿಂತಿರುವ 2 ನೇ ಮಹಿಳೆ ಹಾಗೂ ಕೈಯಲ್ಲಿ ಬ್ಯಾಗ್ ಹಿಡಿದಿರುವ ಮಹಿಳೆಯನ್ನು 5 ನೇ ವಾದಿ ಎಂದು, ಅವರ ಬಲಬದಿಯಲ್ಲಿರುವ ನೀಲಿ ಸೀರೆಯನ್ನು ಧರಿಸಿರುವ
ಮಹಿಳೆಯನ್ನು 3 ನೇ ವಾದಿ ಎಂದು ಗುರುತಿಸಿರುತ್ತಾರೆ. ಸಾಕ್ಷಿಯವರು ಇನ್ನೊಂದು ಭಾವಚಿತ್ರವನ್ನು ನೋಡಿ ಇದು ಮನೆಯ ಗೃಹಪ್ರವೇಶದ ಸಮಯದಲ್ಲಿ ಭಾವಚಿತ್ರ ಎಂದು ಗುರುತಿಸಿದ್ದು (ವಾದಿಯವರ ಪರ ಗೌರವಾನ್ವಿತ ವಕೀಲರು ಸದರಿ ಭಾವಚಿತ್ರವು ಮನೆಯ ಗೃಹಪ್ರವೇಶದ ಸಮಯದಲ್ಲಿ ತೆಗೆದಿರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ) ಅದನ್ನು ನಿಡಿ-10 ಎಂದು ಗುರುತಿಸಲಾಯಿತು . ನಿಡಿ 10 ರಲ್ಲಿ ಮೊದಲಿನ ಸಾಲಿನಲ್ಲಿ ಕುಳಿತಿರುವ ನೀಲಿ ಮತ್ತು ಚಿತ್ರ ಇರುವ ಸೀರೆಯನ್ನು ಧರಿಸಿರುವ ಮಹಿಳೆಯನ್ನು ನಾನು ಎಂದು, ನನ್ನ ಎಡಭಾಗದಲ್ಲಿರುವ ಗಂಡಸನ್ನು ನನ್ನ ಮಗ ಎಂದು ಹಾಗೂ ಬಲಭಾಗದಲ್ಲಿರುವ ಮಹಿಳೆಯರನ್ನು ವಾದಿ 3 ಮತ್ತು 4 ಎಂದು, 3 ನೇ ವಾದಿಯ ಹಿಂದೆ ನಿಂತಿರುವ ಮಹಿಳೆಯನ್ನು 7 ನೇ ವಾದಿ ಎಂದು ಗುರುತಿಸಿರುತ್ತಾರೆ. ಮನೆಯನ್ನು ವಿಭಾಗಪತ್ರ ಆದ ನಂತರ ಕಟ್ಟಿರುವುದೇ ಎಂದರೆ ಹೌದು. ಮನೆಯನ್ನು ಕಟ್ಟುವ ಸಮಯದಲ್ಲಿ ವಾದಿಯರು ಆಕ್ಷೇಪವನ್ನು ಮಾಡಿರುತ್ತಾರೆಯೇ ಎಂದರೆ ಇಲ್ಲ. 10 ನೇ ಪ್ರತಿವಾದಿಯವರು ಖರೀದಿ ಮಾಡಿರುವ ಜಾಗದಲ್ಲಿ ನೀವು ಹಕ್ಕನ್ನು ಕೇಳುತ್ತೀರಾ ಎಂದರೆ ಇಲ್ಲ. 1 ನೇ ಪ್ರತಿವಾದಿಯವರು ಯುವಜಿನ್ ಡಿಸೋಜರವರಿಗೆ ಮಾಡಿಕೊಟ್ಟ, ಯುವಜಿನ್ ಡಿಸೋಜ ಸುಧಾಕರ್ ತೋನ್ಸೆ ರವರಿಗೆ ಮಾಡಿಕೊಟ್ಟ ಹಾಗೂ ಸುಧಾಕರ್ ತೋನ್ಸೆ ರವರು 10 ನೇ ಪ್ರತಿವಾದಿಯವರಿಗೆ ರವರಿಗೆ ಮಾಡಿಕೊಟ್ಟ ಕ್ರಯಪತ್ರಗಳನ್ನು ನೀವು ಪ್ರಶ್ನೆ ಮಾಡಿರುತ್ತೀರಾ ಎಂದರೆ ಇಲ್ಲ. 10 ನೇ ಪ್ರತಿವಾದಿಯವರು ಖರೀದಿಸಿದ ಭೂಮಿಯು ಕೃಷೀಯೇತರ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆ ಎಂದರೆ ಗೊತ್ತಿಲ್ಲ .

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.